ಓ.ಎಸ್. ನಂಃ **28/2011**
ಪಿ <u>ಡಬ್ಲ್ಯೂಃ **4**</u>

ದಿನಾಂಕಃ 15-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎನ್ ಆರ್ ಕೆ ವಕೀಲರಿಂದಃ</u>

ನನಗೆ ಈಗ 50 ವರ್ಷ ವಯಸ್ಸಾಗಿದೆ. ನಾನು ಜೆರಾಕ್ಸ್ ಅಂಗಡಿ ಇಟ್ಟುಕೊಂಡಿರುತ್ತೇನೆ. ಈಗ 6-7 ವರ್ಷಗಳಿಂದ ಸದರಿ ಅಂಗಡಿ ನಡೆಸುತ್ತಿದ್ದೇನೆ. ಅಮೃತಬಾಯಿ ಹಾಗೂ ಜುಗುಣಾಬಯಿ ರವರು ನನ್ನ ದೂರದ ಸಂಬಂಧಿಕರಾಗಿರುತ್ತಾರೆ. ಅವರುಗಳು ನನ್ನ ತಾಯಿಯ ಕಡೆಯಿಂದ ಸಂಬಂಧಿಕರಾಗಿರುತ್ತಾರೆ. ನೀವು ನಿಮ್ಮ ಪ್ರಮಾಣ ಪತ್ರದಲ್ಲಿ 24 ವರ್ಷ ಹಿಂದೆ ಎಂದು ತಿಳಿಸಿದ್ದು ಅದು ಯಾವ ದಿನಾಂಕ, ತಿಂಗಳು ಹಾಗೂ ವರ್ಷ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. 24 ವರ್ಷಗಳ ಹಿಂದೆ ನನ್ನನ್ನು ಉಮಾದೇವಿ ರವರ ಮನೆಗೆ ಬರುವಂತೆ ಕರೆದಿದ್ದರು. ನಿಮ್ಮನ್ನು ಯಾರು ಕರೆದಿದ್ದರು ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಏನೆಂದು ಕರೆದಿದ್ದರು ಎಂದರೆ ಸಾಕ್ಷಿಯು ಉಮಾದೇವಿ ರವರ ಮನೆಯಲ್ಲಿ ಎಲ್ಲರು ಕುಳಿತಿದ್ದಾರೆ ಬನ್ನಿ ಎಂದು ಕರೆದಿದ್ದರು ಎಂದು ನುಡಿಯುತ್ತಾರೆ. ನಮ್ಮ ಮನೆಯಿಂದ ಉಮಾದೇವಿ ರವರ ಮನೆ ಸುಮಾರು 500 ಮೀ. ದೂರು ಇದೆ. ನಾನು ಉಮಾದೇವಿ ರವರ ಮನೆಗೆ ಹೋದಾಗ ಅಲ್ಲಿ ಅಮೃತಬಾಯಿ, ಜುಗುಣಾಬಾಯಿ, ವಕೀಲರು, ಟೀಕಾರಾಮ್ ಸಿಂಗ್ ಹಾಗೂ ಉಮಾದೇವಿ ಮತ್ತು ಇತರರು ಹಾಜರಿದ್ದರು. ಸುಧೀರ್ ವಕೀಲರು ಹಾಜರಿದ್ದರು. ಸದರಿ ವಕೀಲರು ತಾಳಿಕೋಟೆ ಪಟ್ಟಣದವರಾಗಿರುತ್ತಾರೆ. ಸದರಿ ವಕೀಲರು ನನ್ನ ಸಂಬಂಧಿಕರಾಗಿರುವುದಿಲ್ಲ. ಅದಕ್ಕಿಂತ ಮೊದಲಿನಿಂದ ನನಗೆ ಸದರಿ ವಕೀಲರ ಪರಿಚಯ ಇತ್ತು. ಅಮೃತಬಾಯಿ ಹಾಗೂ ಜುಗುಣಾಬಾಯಿ ರವರು ತಮಗೆ ಬಂದ ಆಸ್ತಿಗಳನ್ನು ತಮ್ಮ ಮಗಳು ಹಾಗೂ ಸಹೋದರಿಗೆ ಕೊಡುತ್ತಿರುವುದಾಗಿ ವಕೀಲರಿಗೆ ತಿಳಿಸುತ್ತಿದ್ದರು. ಮೊದಲು ಯಾರು ಹೇಳಿದ್ದರು ಎಂದರೆ ಸಾಕ್ಷಿಯು ಜುಗುಣಾಬಾಯಿ ರವರು ಮೊದಲು ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿಯವರು ಯಾವ ಯಾವ ಆಸ್ತಿಗಳು ಹಾಗೂ ಅವುಗಳು ಯಾರ ಹೆಸರಿನಲ್ಲಿ ಇತ್ತುವೆ ಎಂಬುದನ್ನು ತಿಳಿಸಿರಲಿಲ್ಲ. ಜುಗುಣಾಬಾಯಿ ರವರು ತಮ್ಮ ಆಸ್ತಿಗಳು ತಮ್ಮ ಸಹೋದರ ಪ್ರಮೀಳಾ ರವರಿಗೆ ಹೋಗಬೇಕೆಂದು ತಿಳಿಸಿದ್ದರು. ಯಾವ ಕಾರಣಕ್ಕೆ ಆ

ರೀತಿ ತಿಳಿಸಿದ್ದರು ಎಂದರೆ ಸಾಕ್ಷಿಯು ತಮ್ಮನ್ನು ಯಾರು ನೋಡಿಕೊಳ್ಳುತ್ತಾರೋ ಅವರಿಗೆ ತಮ್ಮ ಆಸ್ತಿ ಹೋಗಬೇಕು ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಜುಗುಣಾಬಾಯಿ ರವರು ಆಸ್ತಿ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದರು, ಆದರೆ ನಾನು ಅವುಗಳನ್ನು ನೋಡಿರುವುದಿಲ್ಲ. ಆಸ್ತಿ ಎಂದರೆ ಹೊಲ ಹಾಗೂ ಮನೆ ಎಲ್ಲ ಸೇರಿರುತ್ತದೆ. ಆದರೆ ನನಗೆ ನಿಖರವಾಗಿ ಯಾವ ಹೊಲ ಹಾಗೂ ಯಾವ ಮನೆ ಎಂದು ಗೊತ್ತಿರುವುದಿಲ್ಲ. ಜುಗುಣಾಬಾಯಿ ರವರು ಹೇಳಿದ ನಂತರ ಅಮೃತಬಾಯಿ ರವರು ಹೇಳಿರುತ್ತಾರೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅಮೃತಬಾಯಿ ರವರು ಯಾವ ಯಾವ ಆಸ್ತಿ ಹಾಗೂ ಅವುಗಳ ವಿಸ್ತೀರ್ಣ ಎಷ್ಟು ಎಂಬುದನ್ನು ಹೇಳಿರುವುದಿಲ್ಲ. ಅಮೃತಬಾಯಿ ರವರೂ ಸಹ ಆಸ್ತಿ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದರು, ಆದರೆ ನಾನು ಅವುಗಳನ್ನು ನೋಡಿಲ್ಲ. ಆದ್ದರಿಂದ ನನಗೆ ಆಸ್ತಿಗಳ ನಂಬರು ಹಾಗು ವಿಸ್ತೀರ್ಣ ಗೊತ್ತಿಲ್ಲ ಎಂದರೆ ಸರಿ. ತಮ್ಮ ಮಗಳು ಪ್ರಮಿಳಾ ರವರು ತಮ್ಮನ್ನು ನೋಡಿಕೊಳ್ಳುತ್ತಿರುವುದರಿಂದ ಆಸ್ತಿ ಅವರಿಗೆ ಹೋಗಬೇಕು ಎಂದು ಅಮೃತಬಾಯಿ ರವರು ತಿಳಿಸಿದ್ದರು. ಆಸ್ತಿಗಳು ಯಾರ ಹೆಸರಿನಲ್ಲಿ ಹಾಗೂ ಯಾರ ಸ್ವಾದೀನದಲ್ಲಿ ಇದ್ದವು ಎಂಬುದನ್ನು ಅಮೃತಬಾಯಿ ರವರು ತಿಳಿಸಿರಲಿಲ್ಲ. ಈ ಎಲ್ಲಾ ಮಾಹಿತಿಯನ್ನು ವಕೀಲರು ಕೈ ಬರಹದಲ್ಲಿ ಬರೆದುಕೊಂಡಿದ್ದರು. ಕನ್ನಡದಲ್ಲಿ ಬರೆದುಕೊಂಡಿದ್ದರು. ಅಮೃತಬಾಯಿ ರವರಿಗೆ ಕನ್ನಡ ಭಾಷೆ ಮಾತನಾಡಲು ಬರುತ್ತಿರಲಿಲ್ಲ, ಅವರು ಹಿಂದಿ ಭಾಷೆ ಮಾತನಾಡುತ್ತಿದ್ದರು ಎಂದರೆ ಸರಿ.

2. ಈ ಮೇಲಿನಂತೆ ಅಮೃತಬಾಯಿ ಹಾಗೂ ಜುಗುಣಾಬಾಯಿ ರವರು ವಕೀಲರಿಗೆ ಮಾಹಿತಿ ನೀಡಿದ ದಿನದಂದೆ ನಾವು ಮುದ್ದೆಬಿಹಾಳಿಗೆ ಹೋಗಿದ್ದೆವು. ಸದರಿಯವರು ಸುಮಾರು ಎರಡು ಗಂಟೆಗಳ ಕಾಲ ವಕೀಲರಿಗೆ ಮಾಹಿತಿ ನೀಡಿದ್ದರು. ನಿಮ್ಮನ್ನು ಕರೆಯಲು ನಿಮ್ಮ ಮನೆಗೆ ಬಂದಾಗ ಮಃ 02.00 ಗಂಟೆ ಆಗಿತ್ತಾ ಎಂದರೆ ಸಾಕ್ಷಿಯು ಹೌದು 2.00 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ತಾಳಿಕೋಟೆಯಿಂದ ಮುದ್ದೆಬಿಹಾಳ ಸುಮಾರು 22-23 ಕಿಮೀ ದೂರ ಇದೆ. ಮಃ 04.00 ಗಂಟೆಗೆ ನಾವು ತಾಳಿಕೋಟೆಯಿಂದ ಮುದ್ದೆಬಿಹಾಳಿಗೆ ಹೊರಟಿದ್ದೆವು. ನಾವು ಕಾರಿನಲ್ಲಿ ಮುದ್ದೆಬಿಹಾಳಿಗೆ ಹೋಗಿದ್ದೆವು. ನೇರವಾಗಿ ಮುದ್ದೆಬಿಹಾಳಿನ ನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದೆವು. ಆದರೆ ಆ ದಿನ ವೇಳೆ (Time) ಆಗಿದ್ದರಿಂದ ಮರಳಿ ಬಂದಿದ್ದೆವು. ಆ ನಂತರ ಮರುದಿನ

ಮತ್ತೆ ಮುದ್ದೆಬಿಹಾಳಿಗೆ ಹೋಗಿದ್ದೆವು. ಮರುದಿನ ಬೆಃ 10.30 ಗಂಟೆಗೆ ಮುದ್ದೆಬಿಹಾಳಿಗೆ ಹೋಗಿದ್ದೆವು. ಮರುದಿನ ನಾನು ನನ್ನ ಮನೆಯಿಂದ ಉಮಾದೇವಿ ರವರ ಮನೆಗೆ ಹೋಗಿದ್ದೆನು, ಅಲ್ಲಿಂದ ಮುದ್ದೆಬಿಹಾಳಿಗೆ ಹೋಗಿದ್ದೆವು. ಮರುದಿನ ನಾನು ಸ್ವತಃ ಉಮಾದೇವಿ ರವರ ಮನೆಗೆ ಹೋಗಿದ್ದೆನು, ನನ್ನನ್ನು ಯಾರು ಕರೆಯಲು ಬಂದಿರಲಿಲ್ಲ. ನಾವು ಎಲ್ಲರು ನೇರವಾಗಿ ನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದೆವು. ಆಗ ವಕೀಲರು ಬಾಂಡ್ ರೆಡಿ ಮಾಡಿಕೊಂಡು ಬಂದಿದ್ದರು. ಎಲ್ಲಿಂದ ರೆಡಿ ಮಾಡಿಕೊಂಡು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಬಾಂಡನ್ನು ನೊಂದಣಾಧಿಕಾರಿಗಳ ಕಚೇರಿಯಲ್ಲಿ ಹಾಜರು ಮಾಡಿದ್ದರು. ಅದರಲ್ಲಿ ಏನು ಬರೆದುಕೊಂಡು ಬಂದಿದ್ದರೋ ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಅದನ್ನು ಓದಿ ನೋಡಿರಲಿಲ್ಲ ಆದರೆ ಹಿಂದಿನ ದಿನ ನೀಡಿದ ಮಾಹಿತಿ ಪ್ರಕಾರ ವಕೀಲರು ದಾಖಲೆ ಬರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ವಕೀಲರು ದಾಖಲೆಯನ್ನು ಟೈಪ್ ಮಾಡಿಸಿಕೊಂಡು ಬಂದು ನೇರವಾಗಿ ನೊಂದಣಾಧಿಕಾರಿಯವರ ಮುಂದೆ ಹಾಜರು ಮಾಡಿದ್ದರು ಎಂದರೆ ಸರಿ. ವಕೀಲರು ದಾಖಲೆಯಲ್ಲಿನ ವಿಷಯವನ್ನು ಓದಿ ತಿಳಿಸಿರಲಿಲ್ಲ ಎಂದರೆ ಸರಿ. ನಂತರ ವಕೀಲರು ನನ್ನ ಸಹಿ ಪಡೆದುಕೊಂಡಿದ್ದರು ಹಾಗೂ ಜುಗುಣಾಬಾಯಿ ಮತ್ತು ಅಮೃತಬಾಯಿ ರವರನ್ನು ದಾಖಲೆಯಲ್ಲಿ ಬರೆದಿರುವ ವಿಷಯ ಸರಿ ಇದೆಯೋ ಇಲ್ಲವೋ ಎಂದು ಕೇಳಿದ್ದರು. ಅಮೃತಬಾಯಿ ಹಾಗೂ ಜುಗುಣಾಬಾಯಿ ರವರು ಮೊದಲು ಸಹಿ ಮಾಡಿದ್ದು, ಆ ನಂತರ ನಾನು ಸಹಿ ಮಾಡಿದ್ದೆನು. ಬಡಿಗೇರ ಎಂಬಾತ ಸಹ ದಾಖಲೆಗೆ ಸಹಿ ಮಾಡಿದ್ದರು. ಟೀಕಾರಾಮ್ ಸಿಂಗ್ ರವರು ಸಹ ದಾಖಲೆಗೆ ಸಹಿ ಮಾಡಿದ್ದರು. ಅಮೃತಬಾಯಿ ಹಾಗೂ ಜುಗುಣಾಬಾಯಿ ರವರ ಎರಡು ಪ್ರತ್ಯೇಕ ದಾಖಲೆಗಳಿಗೆ ನಾನು ಸಹಿ ಮಾಡಿದ್ದೆನು. ಎರಡು ದಾಖಲೆಗಳು ಒಂದೇ ದಿನ ಆಗಿದ್ದವು. ಜುಗುಣಾಬಾಯಿ ರವರಿಗೂ ಸಹ ಕನ್ನಡ ಭಾಷೆ ಓದಲು-ಬರೆಯಲು ಬರುವುದಿಲ್ಲ ಎಂದರೆ ಸರಿ. ಜುಗುಣಾಬಾಯಿ ರವರಿಗೆ ಇಂಗ್ಲೀಷ್ ಭಾಷೆ ಸಹ ಓದಲು ಹಾಗೂ ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

3. ಅಮೃತಬಾಯಿ ಅಥವಾ ಜುಗುಣಾಬಾಯಿ ರವರು ಯಾವುದೇ ಮರಣ ಶಾಸನ ಬರೆದುಕೊಟ್ಟಿಲ್ಲ, ನಾವು ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅಮೃತಬಾಯಿ ಅಥವಾ ಜುಗುಣಾಬಾಯಿ ರವರು ಆ ದಿನದಂದು ಮುದ್ದೆಬಿಹಾಳಿಗೆ ಬಂದಿಲ್ಲ ಹಾಗೂ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ ಎಂದರೆ

ಸರಿಯಲ್ಲ. ನಾನು, ಉಮಾದೇವಿ, ಪ್ರೇಮಪ್ರಕಾಶ ಹಾಗೂ ವಾದಿ ಪ್ರಮೀಳಾ ರವರು ಸೇರಿ ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದೆವೆ ಎಂದರೆ ಸರಿಯಲ್ಲ.

4. ಅಮೃತಬಾಯಿ ರವರು ತೀರಿಕೊಂಡು ಸುಮಾರು 12 ವರ್ಷ ಆಗಿರಬಹುದು. ಅದಕ್ಕಿಂತ 1-2 ವರ್ಷ ಪೂರ್ವದಲ್ಲಿ ಜುಗುಣಾಬಾಯಿ ರವರು ಮರಣಹೊಂದಿರುತ್ತಾರೆ. ಅಮೃತಬಾಯಿ ರವರು ಮರಣಹೊಂದುವ ಪೂರ್ವದಲ್ಲಿ ಹಾಸಿಗೆ ಹಿಡಿದಿದ್ದರು ಎಂದರೆ ನನಗೆ ಗೊತ್ತಿಲ್ಲ. ಮರಣಹೊಂದುವ 8-10 ವರ್ಷ ಪೂರ್ವದಿಂದ ಅಮೃತಬಾಯಿ ರವರು ಮನೆಯಲ್ಲಿಯೇ ಇರುತ್ತಿದ್ದರು, ಎಲ್ಲಿಗೂ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಜುಗುಣಾಬಾಯಿ ರವರಿಗೂ ಸಹ ಹುಷಾರಿರಲಿಲ್ಲ ಹಾಗಾಗಿ ಅವರು ಎಲ್ಲಿಗೂ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ

ಓ.ಎಸ್. ನಂಃ **28/2011**
ಪಿ ಡಬ್ಲ್ಯೂಃ **5**

ದಿನಾಂಕಃ 15-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎನ್ ಆರ್ ಕೆ ವಕೀಲರಿಂದಃ

ನಾನು ತಾಳಿಕೋಟೆ ಪಟ್ಟಣದವನಾಗಿರುತ್ತೇನೆ. ನಾನು ಬಟ್ಟೆ ಹೊಲೆಯುವ ಕೆಲಸ ಮಾಡುತ್ತೇನೆ. ನನಗೆ ಈಗ 60 ವರ್ಷ ವಯಸ್ಸಾಗಿದೆ. ಈಗ 24 ವರ್ಷಗಳ ಹಿಂದೆ ಮಃ 04 ರಿಂದ 4-30 ಗಂಟೆ ಸಮಯದಲ್ಲಿ ನನ್ನನ್ನು ಕರೆಯಲು ಬಂದಿದ್ದರು. 2001 ರಲ್ಲಿ ನನ್ನನ್ನು ಕರೆಯಲು ಬಂದಿದ್ದರು, ನನಗೆ ನಿಖರ ದಿನಾಂಕ ನೆನಪಿಲ್ಲ. ಶಂಕರಸಿಂಗ್ ಎಂಬಾತ ನನ್ನನ್ನು ಕರೆಯಲು ಬಂದಿದ್ದರು. ಭಗತ್ ಸಿಂಗ್ ಮಾವ ರವರ ಮನೆಯವರು ಕರೆಯುತ್ತಿದ್ದಾರೆ ಎಂದು ಮಾತ್ರ ನನಗೆ ಶಂಕರ್ ಸಿಂಗ್ ರವರು ತಿಳಿಸಿದ್ದರು. ನನ್ನ ಅಂಗಡಿಯಿಂದ ಭಗತ್ ಸಿಂಗ್ ರವರ ಮನೆ ಕೇವಲ 05 ನಿಮಿಷದ ದಾರಿ ಇರುತ್ತದೆ. ನಾನು ಭಗತ್ ಸಿಂಗ್ ರವರ ಮನೆಗೆ ಹೋದಾಗ ಅಲ್ಲಿ ಅಮೃತಾಬಾಯಿ, ಜುಗುಣಾಬಾಯಿ, ಉಮಾದೇವಿ ಹಾಗೂ ವಕೀಲರು ಮಾತ್ರ ಹಾಜರಿದ್ದರು. ನಾನು ಹೋದ 5-10 ನಿಮಿಷಗಳ ನಂತರ ಹರಿಸಿಂಗ್ ರವರೂ ಸಹ ಅಲ್ಲಿಗೆ ಬಂದಿದ್ದರು. ನೀವು ಹೋದ ನಂತರ ಏನೇನಾಗಿದೆ ಎಂದರೆ ಸಾಕ್ಷಿಯು ವಕೀಲರು ಕುಳಿತಿದ್ದರು, ನಾನು ಕುಳಿತಿದ್ದೆನು ಹಾಗೂ ಆ ನಂತರ ಮುದ್ದೆಬಿಹಾಳಿಗೆ ಹೋಗುವುದು ಇದೆ ಎಂದು ಹೇಳಿ ಮುದ್ದೆಬಿಹಾಳಿಗೆ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ನೇರವಾಗಿ ನೊಂದಾಣಾಧಿಕಾರಿಗಳ ಕಚೇರಿಗೆ ಹೋಗಿದ್ದೆವು. ನಾವು ಮುದ್ದೆಬಿಹಾಳಿಗೆ ಹೋದಾಗ ಸಮಯ ಮಃ 04 ರಿಂದ 04.30 ಅಗಿತ್ತು. ಮುದ್ದೆಬಿಹಾಳಿಗೆ ಹೊದ ನಂತರ ಏನು ಮಾಡಿರುತ್ತೀರಿ ಎಂದರೆ ಸಾಕ್ಷಿಯು ವಕೀಲರು ಮಾಡಿರುತ್ತಾರೆ ನಾನು ಸುಮ್ಮನೆ ಕುಳಿತಿದ್ದೆನು ಎಂದು ನುಡಿಯುತ್ತಾರೆ. ಯಾವುದಾದರು ದಾಖಲೆಗೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಒಂದು ದಾಖಲೆಗೆ ಸಹಿ ಮಾಡಿದ್ದೆನು ಎಂದು ನುಡಿಯುತ್ತಾರೆ. ನಾನು ಸಹಿ ಮಾಡಿದ ನಂತರ ಹರಿಸಿಂಗ್ ರವರು ದಾಖಲೆಗೆ ಸಹಿ ಮಾಡಿರುತ್ತಾರೆ. ನಾನು ಸಹಿ ಮಾಡಿದ ದಾಖಲೆ ಯಾವ ರೀತಿ ದಾಖಲೆ ಆಗಿರುತ್ತದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ ಎಂದರೆ ಸರಿ. ದಾಖಲೆಯಲ್ಲಿ ಏನು ಬರೆದಿತ್ತು ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅವರ ಕುಟುಂಬದ ವಿಷಯ ಎಂಬುದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನಿಮ್ಮನ್ನು ಹಾಗೂ ಹರಿಸಿಂಗ್ ರವರನ್ನು ಹೊರತು

ಪಡಿಸಿ ದಾಖಲೆಗೆ ಬೇರೆ ಯಾರು ಸಹಿ ಮಾಡಿಲ್ಲವೇ ಎಂದರೆ ಸಾಕ್ಷಿ ಮುದ್ದೆಬಿಹಾಳಿನ ಬಡಿಗೇರ್ ಎಂಬಾತ ಒಬ್ಬ ಸಹಿ ಮಾಡಿರಬಹುದು ಎಂದು ನುಡಿಯುತ್ತಾರೆ. ಆ ದಿನ ಅರ್ದ-ಮರ್ದ ಆಗಿದ್ದರಿಂದ ಮರುದಿನ ಹೋಗಿದ್ದೆವು. ಅರ್ದ-ಮರ್ದ ಎಂದರೆ ಏನೇನಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮರುದಿನ ಹೋದಾಗ ನೀವು ಸಹಿ ಮಾಡಿದ್ದೀರಾ ಎಂದರೆ ಯೋಚಿಸಿ ಇಲ್ಲ ಎಂದು ನುಡಿಯುತ್ತಾರೆ.

2. ಉಮಾದೇವಿ ರವರು ನನ್ನ ಸಂಬಂಧಿಕರಾಗಿರುವುದಿಲ್ಲ. ಅಮೃತಬಾಯಿ ಹಾಗೂ ಜುಗುಣಾಬಾಯಿ ರವರನ್ನು ನಾನು ಆ ಪೂರ್ವದಲ್ಲಿ ನೋಡಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿಯವರ ಕುಟುಂಬದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ನಾವು 24 ವರ್ಷದ ಹಿಂದೆ ನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದೆವು ಹಾಗೂ ನಾನು ದಾಖಲೆಗೆ ಸಹಿ ಮಾಡಿದ್ದೆನು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ದಾಖಲೆಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಮೃತಬಾಯಿ ಹಾಗೂ ಜುಗುಣಾಬಾಯಿ ರವರು ಹೇಳಿರುವ ವಿಷಯ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ